

'ಹಾಗಲ್ಲ ಸಾರ್... ಕತೆ ಇಷ್ಟ ಆಯಿತು. ಆದರೆ ಹುಲಿ ಸಾಯಬಾರದಿತ್ತು' ಅಂದಳು

ಮಂಜಪ್ಪ ಸರ್‌ಗೆ ಅಚ್ಚರಿ... ಯಾಕಮ್ಮ...

'ಭಾಷೆ ನೀಡಿ ಹೋದ ಹಸು ವಾಪಸು ಬಂತು. ಕಾಯುತ್ತಿದ್ದ ಹುಲಿಗೆ ಸಣ್ಣ ಅನುಮಾನ ಇತ್ತು. ಹಸು ಬರುತ್ತೋ ಇಲ್ವೋ ಅಂತ. ಕಡೆಗೂ ಬಂತಲ್ಲ ಅಂತ ಅದನ್ನು ತಿನ್ನದೇ ಹಸುವಿನ ಸತ್ಯಕ್ಕೆ ಮೆಚ್ಚಿತು. ಆದರೆ ಹಸುಗೆ ಒಂದು ವಿಷ್ ಹೇಳಿ ಕಾಡಿನೊಳಕ್ಕೆ ಹೋಗಿದ್ದರೆ? ಒಂದು ದಿನ ಉಪವಾಸ ಇದ್ದರೇನು ನಷ್ಟ ಆಗ್ತಿರಲಿಲ್ಲ ತನ್ನ ಪ್ರಾಣ ಉಳಿಸಿಕೊಂಡಿದ್ದರೆ.... ಛೆ...ಹುಲಿರಾಯ ಸತ್ತಿದ್ದು ನ್ಯಾಯ ಅಲ್ಲ ಸಾರ್' ಅಂತ ಅತ್ತುಬಿಟ್ಟಳು.

ಮಂಜಪ್ಪ ಸರಿಗೆ ಈ ಮಗುವಿನ ಮನಸ್ಸಿಗೆ ಕರಗಿಬಿಟ್ಟರು. ವಿಭಿನ್ನ ಆಲೋಚನಾ ಪರಿಗೆ ಶಹಭಾಸ್‌ಗಿರಿ ಕೊಟ್ಟರು. ಶಾಲೆ ಬಿಟ್ಟ ನಂತರ ಸಪ್ಪೆ ಮುಖ ಮಾಡಿಕೊಂಡು ಮನೆ ದಾರಿ ಹಿಡಿದಿದ್ದಳು ಶಿಝಾ.

ನಡೆದ ಕತೆ ಹೇಳಿದಾಗ ರೇಷ್ಮಾ ಮಗಳ ಮುಖವನ್ನೇ ನೋಡಿದಳು. ಹುಲಿಯೂ ಬದುಕಲೆಂಬ ಮಗಳ ಕನಿಕರಕ್ಕೆ ಮನದಲ್ಲೇ ಮೆಚ್ಚಿಕೊಂಡಳು.

'ಓ... ಅದಕ್ಕೆ ರಾತ್ರಿ ನಿದ್ದೆಲೆ ಆವಾಗಾವಾಗ ಹುಲಿ ಹುಲಿ ಅಂತಿದ್ದೆ, ಪುಣ್ಯಕೋಟಿ ಅಂತಿದ್ದೆ. ಬೆಚ್ಚಿ ಬೆಚ್ಚಿ ಬೀಳ್ತಿದ್ದೆ. ಕನಸಲ್ಲಿ ಹುಲಿ ಬಂದಿತ್ತಾ? ಹಸು ಬಂದಿತ್ತಾ?' ಮಗಳನ್ನು ಹತ್ತಿರ ಎಳೆದುಕೊಂಡು ಅಪ್ಪುತ್ತಾ ಕೇಳಿದಳು.

ಶಿಝಾ 'ನೆನಪಿಲ್ಲ' ಅಂದಳು.

'ನೋಡು ಮಗಳೇ ಅದು ಕತೆ. ಜನಪದ ಕತೆ. ಒಳ್ಳೆಯದು ಉಳಿದು ಕೆಟ್ಟದ್ದು ಅಳಿಯಬೇಕು ಎಂದು ನಮ್ಮ ಹಳೆಯ ಜನ ತೀರ್ಮಾನ ಮಾಡಿದ್ದರು. ಒಳ್ಳೆಯದಕ್ಕೆ ಬೆಲೆ ಬರಬೇಕಾದರೆ ಕೆಟ್ಟದ್ದು ಕೊನೆಗಾದರೂ ನಾಶವಾಗಲೇಬೇಕು. ಇದು ಪ್ರಕೃತಿ ನಿಯಮವೂ ಹೌದು.

ಹುಲಿ ಬದುಕಲಿ ಎಂದ ನಿನ್ನ ಮನ ದೊಡ್ಡದು. ಕೆಟ್ಟವರಿಗೂ ಒಳ್ಳೆಯದನ್ನೇ ಬಯಸೋಣ ಅಂತ ಪುನೀತ್ ರಾಜ್‌ಕುಮಾರ್ ಹೇಳಿದ್ದು ನಿನ್ನ ಹೃದಯದಲ್ಲಿ ಮನೆ ಮಾಡಿದೆ. ಎಲ್ಲವನ್ನೂ ಸ್ವೀಕರಿಸಿ ನಡೆದಾಗ ಬದುಕು ಚೆನ್ನಾಗಿರುತ್ತದೆ. ಏಳು ಫ್ರೆಶಪ್ ಆಗು ಹಾಲು ಕೊಡ್ತೀನಿ ಅಪ್ಪಾಜಿ ಬ್ರೆಡ್ ತರಲು ಹೋಗಿದ್ದಾರೆ' ಎಂದಳು.

ಶಿಝಾಗೆ ಅಮ್ಮನ ಮಾತು ಕೇಳಿ ಏನೋ ಸಮಾಧಾನ ಆದಂತಾಯಿತು.

ಕಿಟಕಿಯಿಂದ ಹೊರ ನೋಡಿದಳು ಸೂರ್ಯನ ಬೆಳಕು ಒಳ ಬರುತ್ತಿತ್ತು. ■

# ಮುಗಿಲ ಕುಣಿತ

■ **ನಾಗರಾಜ ಬಿ. ನಾಯ್ಕ**

ಕಲೆ: ಸಂತೋಷ್ ಸಸಿಹಿತ್ಲು



ಬಾನಲಿ ಹಾರಿವೆ
ಕಪ್ಪನೆ ಮೋಡ
ಮಳೆಗಳು ತಂದಿವೆ
ಹನಿಯ ಹಾಡ

ಹಾಡಿನ ಗೂಡು
ತೂಗಿವೆ ನೋಡು
ಚಿಟ್ಟೆಯ ತೇರು
ಸಾಗಿದೆ ಜೋರು

ಹಕ್ಕಿಗೆ ಬಾನು
ಹಾರುವ ಜೇನು
ಕುಣಿವ ನವಿಲು
ಹತ್ತಿಯ ಮುಗಿಲು

ಗದ್ದೆಯ ಬಯಲಲಿ
ನೀರಿನ ಝರಿ
ತೋಟದ ನಡುವಲಿ
ಹರಿಯುವ ಪರಿ

ಏನಿದು ಅಂದ
ಮುಗಿಲಿಗೆ ಚೆಂದ
ಬಣ್ಣದ ಬಿಲ್ಲಿದು
ಬುವಿಯ ಬಂಧ

ಸಗ್ಗವೇ ಬುವಿಗೆ
ಬಂದಿದೆ ಈಗ
ಹೊರಗಡೆ ಬನ್ನಿರಿ
ಮಕ್ಕಳೇ ಬೇಗ ■

## ಕುಂಚ ಪ್ರಪಂಚ

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in





**ಅಥರ್ವ ಮುತ್ನಾಳಿ**
6ನೇ ತರಗತಿ, ಚೇತನ ಪಬ್ಲಿಕ್ ಸ್ಕೂಲ್, ಹುಬ್ಬಳ್ಳಿ





**ಎಸ್.ಟಿ. ಅನಘ**
ಯು.ಕೆ.ಜಿ.
ಪೂರ್ಣಪ್ರಜ್ಞ ವಿದ್ಯಾ ಕೇಂದ್ರ, ಬೆಂಗಳೂರು